**ದಿನಾಂಕಃ 17.04.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಕೆ.ಜೆ.ಎಂ ರವರಿಂದಃ**

ವಾದಿ ನನ್ನ ತಂದೆಯ ತಂಗಿ. ಸರ್ವೆ ನಂ.127, 66/2 ಮತ್ತು 139 ಜಮೀನುಗಳನ್ನು ವಾದಿಯ ತಂದೆ ಸಿದ್ದರೆಡ್ಡಿ ರವರು ಖರೀದಿರುತ್ತಾರೆ ಎಂದರೆ ಸರಿ. ಸಿದ್ದರೆಡ್ಡಿಗೆ ಗುರುವಾರೆಡ್ಡಿ, ಮಲ್ಲರೆಡ್ಡಿ, ರಾಮರೆಡ್ಡಿ, ಪ್ರಭಾಕರ್ ರೆಡ್ಡಿ, ಶ್ರೀನಿವಾಸ್ ರೆಡ್ಡಿ, ಮತ್ತು ವಾದಿ ಸರೋಜಮ್ಮ, ಗೌರಮ್ಮ ಮತ್ತು ಪಾರ್ವತಮ್ಮ ರವರು ಮಕ್ಕಳು ಎಂದರೆ ಸರಿ. ವಾದಿಯು ನನ್ನ ತಂದೆ ಮತ್ತು ಉಳಿಕೆ ಕುಟುಂಬದ ಸದಸ್ಯರ ?ವಿರುದ್ಧ ವಿಭಾಗಕ್ಕಾಗಿ ದಿಃ31.01.2005 ರಂದು ಬೆಂಗಳೂರು ಸಿಟಪಿ ಸಿವಿಲ್ ಕೋರ್ಟಿನಲ್ಲಿ ಸಲ್ಲಿಸಿರುದ್ದರು ಎಂದರೆ ಸಾಕ್ಷಿಯು ಕೇಳಿರುತ್ತೇನೆ ಆದರೆ ನನಗೆ ಕನ್ಫಮ್ ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ ದಾವೆ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಂದೆ ಚೆನ್ನಾಗಿ ಇದ್ದೇವೆ. ಈ ದಿನ ಸಹ ನನ್ನ ತಂದೆಯು ನನ್ನನೊಂದಿಗೆ ನ್ಯಾಯಾಲಯಕ್ಕೆ ಬಂದಿದ್ದೇನೆ. ವಾದಿಯು ಈಗಾಗಲೆ ವಿಭಾಗಕ್ಕಾಗಿ ಸಲ್ಲಿಸಿದ ದಾವೆಯು ಏನಾಗಿರುತ್ತದೆ ಎಂದು ನನ್ನ ತಂದೆಯಾಗಲಿ ನನ್ನ ದೊಡ್ಡಪ್ಪನಾಗಲಿ ಕೇಳಿ ತಿಳಿದುಕೊಂಡಿಲ್ಲ. ಸದರಿ ವಿಭಾಗಕ್ಕಾಗಿ ಸಲ್ಲಿಸಿದ ದಾವೆಯು ಮೇಲ್ಕಂಡ ಸರ್ವೆ ನಂಬರ್ ಜಮೀನಿನ ಮೇಲೆ 9 ನೇ ಒಂದು ಭಾಗ ವಾದಿಗೆ ನೀಡಬೇಕು ಎನ್ನುವ ಆಇಯನ್ನು ದಿಃ12.01.2010 ರಂದು ಡಿಕ್ರಿಗೊಂಡಿರುತ್ತದೆ ಎಂದರೆ ನನಗೆ ಗೊತ್ತಿದೆ. ಸದರಿ ದಾವೆಯು ಡಿಕ್ರಿಗೊಂಡ ನಂತರ ವಾದಿಯು ಎಫ್.ಡಿ.ಪಿ 47/2010 ರಂತೆ ಮತ್ತೊಂದು ಪ್ರಕರಣವನ್ನು ಹೂಡಿದ್ದರು ಪ್ರಕರಣದಲ್ಲಿ ಹಲಗೆಬಡೆರಲಿಲ್ಲ ಸರ್ವೆ ನಂ.120 ಜಮೀನಿನ ಮೇಲೆ 0.09.66 ಗುಂಟೆ ಜಮೀನು ವಾದಿಯ ಭಾಗಕ್ಕೆ ಸರ್ವೆ ಮಾಡಿ ಸ್ಕೆಚ್ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಪ್ರತಿವಾದಿಯ

ಸಹಿಯನ್ನು ಗುರುತಿಸಲು ಹೇಳಿದರೆ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಪ್ರತಿವಾದಿಯ ಸಹಿ ಅಲ್ಲ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀ ಸವಾಲು  ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

**ಓ. ಹೇ.ಕೇ.ಸ.ಇದೆ.**

**(ಓಂಕಾರಪ್ಪ. ಆರ್.)**
**5 ನೇ ಅ.ನ.ಸಿ.ಸಿ. ನ್ಯಾಯಾಧೀಶರು,**
**ಬೆಂಗಳೂರು ನಗರ.**